# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 617
ಸದಸ್ಯರ ಹೆಸರು : ಶ್ರೀ ಎಸ್.ಎಲ್.ಭೋಜೇಗೌಡ
ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಉತ್ತರಿಸುವ ದಿನಾಂಕ : 23.12.2022

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಸಾರಿಗೆ ಸೌಲಭ್ಯವನ್ನು ಅಭಿವೃದ್ಧಿಪಡಿಸಲು ಈ ಸಾಲಿನಲ್ಲಿ ನೀಡಿರುವ ಅನುದಾನ ಎಷ್ಟು; ಯಾವ ಯಾವ ಕೆಲಸ ಕಾರ್ಯಗಳಿಗೆ ನೀಡಲಾಗಿದೆ; (ಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿ ಸಾರಿಗೆ ಸೌಲಭ್ಯವನ್ನು ಅಭಿವೃದ್ಧಿಪಡಿಸಲು ಪ್ರಸ್ತುತ ಸಾಲಿನಲ್ಲಿ ಸಾರಿಗೆ ಸಂಸ್ಥೆಗಳಿಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನ, ಉದ್ದೇಶದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ | ಸರ್ಕಾರದಿಂದ ನೀಡಿರುವ ಅನುದಾನಗಳನ್ನು ವಿವಿಧ ನಿಗಮಗಳಿಂದ ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲು ಸಾಧ್ಯವಾಗಿಲ್ಲದಿರುವುದಕ್ಕೆ ಕಾರಣಗಳೇನು; | ಕೋವಿಡ್-19ರ ಹಿನ್ನೆಲೆಯಲ್ಲಿ ಘೋಷಿಸಿದ್ದ ಲಾಕ್‌ಡೌನ್ ತೆರವಿನ ನಂತರ ಸಾರಿಗೆ ಸಂಸ್ಥೆಗಳ ಸಾರಿಗೆಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರ ಸಂಖ್ಯೆ ಕಡಿಮೆ ಇದ್ದುದರಿಂದ ಕೋವಿಡ್ ಪೂರ್ವದಲ್ಲಿ ಇದ್ದಂತಹ ಎಲ್ಲಾ ಅನುಸೂಚಿಗಳ ಕಾರ್ಯಾಚರಣೆಯನ್ನು ಒಟ್ಟಿಗೆ ಪ್ರಾರಂಭಿಸದೇ ಸಾರ್ವಜನಿಕ ಪ್ರಯಾಣಿಕರ ಮತ್ತು ವಿದ್ಯಾರ್ಥಿಗಳ ಅವಶ್ಯಕತೆ ಹಾಗೂ ಸಂಚಾರ ದಟ್ಟಣೆಗೆ ಅನುಗುಣವಾಗಿ ಸಾರಿಗೆಗಳನ್ನು ಕಾರ್ಯಾಚರಣೆ |



Generated from eOffice by B SREERAMULU, TD-MIN(BS), TRANSPORT MINISTER, Trans on 21/12/2022 06:47 PM

| | | |
|---|---|---|
| | | ಮಾಡಲಾಗುತ್ತಿದ್ದು, ಆಯಾ ಮಾರ್ಗಗಳಲ್ಲಿ ಉಂಟಾಗುವ ಪ್ರಯಾಣಿಕರ ಒತ್ತಡವನ್ನು ಪರಿಗಣಿಸಿ, ಅವಶ್ಯಕತೆಗನುಗುಣವಾಗಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗುತ್ತಿದೆ.<br><br>ಪ್ರಸ್ತುತ ನಗರ ಪ್ರದೇಶದ ಮತ್ತು ಗ್ರಾಮೀಣ ಪ್ರದೇಶದ ಶಾಲಾ-ಕಾಲೇಜು ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕ ಪ್ರಯಾಣಿಕರ ಒತ್ತಡಕ್ಕನುಗುಣವಾಗಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಪ್ರಸ್ತುತ ಕಲ್ಪಿಸಿರುವ ಸಾರಿಗೆ ಸೌಲಭ್ಯವು ಅವಶ್ಯಕತೆಗನುಗುಣವಾಗಿರುತ್ತದೆ.<br><br>ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶಗಳ ಸಾರ್ವಜನಿಕ ಪ್ರಯಾಣಿಕರ/ ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಸಾರಿಗೆ ಸೇವೆಗಳನ್ನು ಹೆಚ್ಚಿಸಿಕೊಂಡು ಕಾರ್ಯಾಚರಣೆ ಮಾಡಲಾಗುತ್ತಿದೆ. |
| ಇ | ಸಾರಿಗೆ ಇಲಾಖೆಯ ಎಲ್ಲಾ ನಿಗಮದ ನೌಕರರಿಗೆ ನೀಡುತ್ತಿರುವ ವೇತನ ಕಡಿಮೆಯಾಗಿರುವುದರಿಂದ ಸರ್ಕಾರ ವೇತನವನ್ನು ಹೆಚ್ಚಳ ಮಾಡುವುದು ಹಾಗೂ ನೌಕರರ ವಿವಿಧ ಪ್ರಮುಖ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ. | ರಾಜ್ಯ ರಸ್ತೆ ಸಾರಿಗೆ ನೌಕರರ ವೇತನವನ್ನು ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಪರಿಷ್ಕರಿಸುವ ಪದ್ಧತಿ ಜಾರಿಯಲ್ಲಿದೆ ಮತ್ತು ದಿನಾಂಕ:01.01.2020ರಿಂದ ವೇತನ ಪರಿಷ್ಕರಣೆ ಆಗಬೇಕಿದೆ. ಪ್ರಮುಖ ಕಾರ್ಮಿಕ ಸಂಘಟನೆಗಳು ತಮ್ಮ ಬೇಡಿಕೆಗಳ ಪಟ್ಟಿಯನ್ನು 2019ರ ಡಿಸೆಂಬರ್ ಅಂತ್ಯದಲ್ಲಿ ನೀಡಿದ್ದು, ತತ್ಸಂಬಂಧ ಪ್ರಾಥಮಿಕ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು. ಆದರೆ, ಈ ಮಧ್ಯೆ ರಾಜ್ಯ ರಸ್ತೆ ಸಾರಿಗೆ ನೌಕರರನ್ನು ರಾಜ್ಯ "ಸರ್ಕಾರಿ ನೌಕರ"ರೆಂದು ಪರಿಗಣಿಸಬೇಕು ಮತ್ತು ಸರ್ಕಾರಿ ನೌಕರರಿಗೆ ಸಿಗುವ ಎಲ್ಲಾ ಸೌಲಭ್ಯಗಳನ್ನು ತಮಗೆ ನೀಡಬೇಕು ಮತ್ತು ಆರನೇ ವೇತನ ಆಯೋಗದ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳಬೇಕು ಎಂಬ ಇತ್ಯಾದಿ ಬೇಡಿಕೆಗಳನ್ನು ಈಡೇರಿಸುವಂತೆ ನಿಗಮಗಳ ನೌಕರರ ಕೆಲವು ಒಕ್ಕೂಟಗಳು ಮುಷ್ಕರ ಹೂಡಿರುತ್ತಾರೆ.<br><br>ಈ ಹಂತದಲ್ಲಿ ಕೋವಿಡ್-19 ಸಾಂಕ್ರಾಮಿಕ ರೋಗವು ಸಹ ರಾಜ್ಯದಲ್ಲಿ ವ್ಯಾಪಕವಾಗಿ ಹರಡಿ, ಕ್ರಮೇಣ ನಿಗಮದ ಬಸ್ಸುಗಳ ಆಚರಣೆಯನ್ನು |



Generated from eOffice by B SREERAMULU, TD-MIN(BS), TRANSPORT MINISTER, Trans on 21/12/2022 06:47 PM

| | | |
|---|---|---|
| | | ಸ್ಥಗಿತಗೊಳಿಸಿದ್ದರಿಂದ, ನಿಗಮಗಳಿಗೆ ಯಾವುದೇ ಸಾರಿಗೆ ಆದಾಯ ಬಾರದೇ ನೌಕರರ ವೇತನ ನೀಡಲು ಸಹ ಆರ್ಥಿಕ ಮುಗ್ಗಟ್ಟು ಎದುರಾಗಿದ್ದ ಸಂದರ್ಭದಲ್ಲಿ ರಾಜ್ಯ ಸರ್ಕಾರವು ನೌಕರರ ವೇತನ ಪಾವತಿಗಾಗಿ ಅನುದಾನವನ್ನು ಬಿಡುಗಡೆ ಮಾಡಿ ಅನುಕೂಲ ಮಾಡಿಕೊಟ್ಟಿರುತ್ತದೆ.<br><br>ಸಾರಿಗೆ ಸಂಸ್ಥೆಗಳ ನೌಕರರ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ 04 ಸಾರಿಗೆ ಸಂಸ್ಥೆಗಳು ವ್ಯವಸ್ಥಾಪಕ ನಿರ್ದೇಶಕರುಗಳನ್ನೊಳಗೊಂಡ ಆಂತರಿಕ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ವರದಿಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |

ಸಂಖ್ಯೆ: ಟಿಡಿ 287 ಟಿಸಿಕ್ಯೂ 2022

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು



Generated from eOffice by B SREERAMULU, TD-MIN(BS), TRANSPORT MINISTER, Trans on 21/12/2022 06:47 PM

| | | |
|---|---|---|
| | | ಸ್ಥಗಿತಗೊಳಿಸಿದ್ದರಿಂದ, ನಿಗಮಗಳಿಗೆ ಯಾವುದೇ ಸಾರಿಗೆ ಆದಾಯ ಬಾರದೇ ನೌಕರರ ವೇತನ ನೀಡಲು ಸಹ ಆರ್ಥಿಕ ಮುಗ್ಗಟ್ಟು ಎದುರಾಗಿದ್ದ ಸಂದರ್ಭದಲ್ಲಿ ರಾಜ್ಯ ಸರ್ಕಾರವು ನೌಕರರ ವೇತನ ಪಾವತಿಗಾಗಿ ಅನುದಾನವನ್ನು ಬಿಡುಗಡೆ ಮಾಡಿ ಅನುಕೂಲ ಮಾಡಿಕೊಟ್ಟಿರುತ್ತದೆ.<br><br>ಸಾರಿಗೆ ಸಂಸ್ಥೆಗಳ ನೌಕರರ ವೇತನ ಪರಿಷ್ಕರಣೆಗೆ ಸಂಬಂಧಿಸಿದಂತೆ 04 ಸಾರಿಗೆ ಸಂಸ್ಥೆಗಳು ವ್ಯವಸ್ಥಾಪಕ ನಿರ್ದೇಶಕರುಗಳನ್ನೊಳಗೊಂಡ ಆಂತರಿಕ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ವರದಿಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |

ಸಂಖ್ಯೆ: ಟಿಡಿ 287 ಟಿಸಿಕ್ಯೂ 2022

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು



Generated from eOffice by B SREERAMULU, TD-MIN(BS), TRANSPORT MINISTER, Trans on 21/12/2022 06:47 PM

# ಅನುಬಂಧ

| ಯೋಜನೆಗಳು | ಒದಗಿಸಿರುವ ಅನುದಾನ | ಉದ್ದೇಶಿತ ಕಾರ್ಯಕ್ರಮಗಳು |
|---|---|---|
| | **ಕ.ರಾ.ರ.ಸಾ.ನಿಗಮ** | |
| ಬಂಡವಾಳ ವೆಚ್ಚಗಳು | 2877.00 | ಮೂಲಸೌಕರ್ಯ ಅಭಿವೃದ್ಧಿಗಾಗಿ (ಬಸ್ ಘಟಕ, ಬಸ್ ನಿಲ್ದಾಣ ಕಾಮಗಾರಿಗಳು) |
| ಎಸ್.ಸಿ.ಎಸ್.ಪಿ. | 105.75 | ಪ.ಜಾ./ಪ.ಪಂ. ತರಬೇತಿ ಕೇಂದ್ರಗಳ ಅಭಿವೃದ್ಧಿ ಕೆಲಸಗಳು |
| ಟಿ.ಎಸ್.ಪಿ. | 17.25 | |
| **ಒಟ್ಟು** | **3000.00** | |
| | **ಬೆಂ.ಮ.ಸಾ.ಸಂಸ್ಥೆ** | |
| ಬಂಡವಾಳ ವೆಚ್ಚಗಳು | 5000.00 | ಮೂಲಸೌಕರ್ಯ ಅಭಿವೃದ್ಧಿಗಾಗಿ (ಬಸ್ ಘಟಕ, ಬಸ್ ನಿಲ್ದಾಣ ಕಾಮಗಾರಿಗಳು) |
| ಎಸ್.ಸಿ.ಎಸ್.ಪಿ. | 800.00 | ಪ.ಜಾ. / ಪ.ಪಂ. ತರಬೇತಿ ಕೇಂದ್ರದ ಅಭಿವೃದ್ಧಿ ಕೆಲಸಗಳು ಹಾಗೂ ಪ.ಜಾ. / ಪ.ಪಂ. ಅಭ್ಯರ್ಥಿಗಳಿಗೆ ತರಬೇತಿ ಕಾರ್ಯಕ್ರಮ |
| ಟಿ.ಎಸ್.ಪಿ. | 200.00 | |
| ಬಸ್ಸುಗಳ ಖರೀದಿಗಾಗಿ ಧನಸಹಾಯ | 20000.00 | ಹೊಸ ಬಸ್ಸುಗಳ ಖರೀದಿಗೆ ಪಡೆದಿರುವ ಸಾಲದ ಅಸಲು ಮತ್ತು ಬಡ್ಡಿ ಮೊತ್ತದ ಮರುಪಾವತಿಗಾಗಿ ಹಾಗೂ ಕೇಂದ್ರ ಸರ್ಕಾರದ ಫೇಮ್-II ಯೋಜನೆಯಡಿ ಒದಗಿಸುವ ಸಹಾಯಧನದೊಂದಿಗೆ ರಾಜ್ಯ ಸರ್ಕಾರದ ರೂ. 10000.00 ಲಕ್ಷಗಳನ್ನು ಬಳಸಿ ಎಲೆಕ್ಟ್ರಿಕ್ ಬಸ್‌ಗಳು ಕಾರ್ಯಚರಣೆಗಾಗಿ |
| ಬಸ್ ಖರೀಯ ಸಾಲ ಮರುಪಾವತಿಗಾಗಿ | 7850.00 | ಹಿಂದಿನ ಸಾಲುಗಳಲ್ಲಿ ಬಸ್ಸುಗಳ ಖರೀದಿಗೆ ಪಡೆದಿರುವ ಸಾಲದ ಅಸಲು ಮತ್ತು ಬಡ್ಡಿ ಮೊತ್ತದ ಮರುಪಾವತಿಗಾಗಿ |
| **ಒಟ್ಟು** | **33850.00** | |
| | **ವಾ.ಕ.ರ.ಸಾ.ಸಂಸ್ಥೆ** | |
| ಬಂಡವಾಳ ವೆಚ್ಚಗಳು | 2399.00 | ಮೂಲಸೌಕರ್ಯ ಅಭಿವೃದ್ಧಿಗಾಗಿ (ಬಸ್ ಘಟಕ, ಬಸ್ ನಿಲ್ದಾಣ ಕಾಮಗಾರಿಗಳು) |
| ಎಸ್.ಸಿ.ಎಸ್.ಪಿ. | 81.00 | ಪ.ಜಾ. / ಪ.ಪಂ. ಅಭ್ಯರ್ಥಿಗಳಿಗೆ ತರಬೇತಿ ಕಾರ್ಯಕ್ರಮ |
| ಟಿ.ಎಸ್.ಪಿ. | 20.00 | |
| **ಒಟ್ಟು** | **2500.00** | |
| | **ಕ.ಕ.ರ.ಸಾ.ನಿಗಮ** | |
| ಬಂಡವಾಳ ವೆಚ್ಚಗಳು | 1443.50 | ಮೂಲಸೌಕರ್ಯ ಅಭಿವೃದ್ಧಿಗಾಗಿ (ಬಸ್ ಘಟಕ, ಬಸ್ ನಿಲ್ದಾಣ ಕಾಮಗಾರಿಗಳು) |
| ಎಸ್.ಸಿ.ಎಸ್.ಪಿ. | 45.00 | ಪ.ಜಾ. / ಪ.ಪಂ. ಅಭ್ಯರ್ಥಿಗಳಿಗೆ ತರಬೇತಿ ಕಾರ್ಯಕ್ರಮ |
| ಟಿ.ಎಸ್.ಪಿ. | 11.50 | |
| ಎಸ್.ಸಿ.ಎಸ್.ಪಿ. (ಬಳಕೆಯಾಗದ ಮೊತ್ತ) | 256.00 | ಪ.ಜಾ. / ಪ.ಪಂ. ತರಬೇತಿ ಕೇಂದ್ರದ ನಿರ್ಮಾಣ ಕಾಮಗಾರಿಗಾಗಿ |
| ಟಿ.ಎಸ್.ಪಿ. (ಬಳಕೆಯಾಗದ ಮೊತ್ತ) | 96.00 | |
| **ಒಟ್ಟು** | **1852.00** | |